ಪಿ. ಚಿದಾನಂದ, ಜವನಗೊಂಡನಹಳ್ಳಿ

ಕನ್ನಡ ಭಾಷೆ ಮಾತ್ರ ಗೊತ್ತು ಎಂದರೆ ಕರ್ನಾಟಕದಲ್ಲಿ ಕೆಲಸ ಸಿಗುವುದಿಲ್ಲವಲ್ಲಾ...?



ಸರಿಯೇ. ಭಾಷೆಯೊಂದಿಗೆ ಕನಿಷ್ಠ ಕೊಂಚ ಕೆಲಸವಾದರೂ ಗೊತ್ತಿರಬೇಕಲ್ಲವೇ.

ಶಿವಮೊಗ್ಗ ರಮೇಶ್, ಮೈಸೂರು

ಫ್ಲವರ್‌ಗೂ, ಲವರ್‌ಗೂ ವ್ಯತ್ಯಾಸವೇನು?

ಸಸಿ ಏರುತ್ತಿದ್ದಂತೆ ಫ್ಲವರ್ ಗುಚ್ಛ; ಶಶಿ ಏರುತ್ತಿದ್ದಂತೆ ಲವರ್ ಹುಚ್ಚ.

ಪಿ.ಎನ್. ಶ್ರೀವತ್ಸ, ಬೆಂಗಳೂರು

ನಿದರ್ಶನವಾಗಬೇಕಾದ ಹೆಣ್ಣು ಇತ್ತೀಚೆಗೆ ಪ್ರದರ್ಶನವಾಗುತ್ತಿರುವುದು ದುರಂತವಲ್ಲವೆ?

ಸೀತೆಯೂ ಸ್ವಯಂವರದಲ್ಲಿ ಪ್ರದರ್ಶಿತಳೇ. ಆಗ ಹೆಚ್ಚು ರಾಮರಿದ್ದರು, ಈಗ ಹೆಚ್ಚು ಹರಾಮರಿದ್ದಾರಷ್ಟೆ.

ಫಾಲನೇತ್ರ ಸಜ್ಜನ, ಶಿರಸಿ

ಬರ್ಮುಡಾ ಟ್ರಯಾಂಗಲ್‌ನಲ್ಲಿ ಬೆಕ್ಕನ್ನು ಬಿಟ್ಟು ಬಂದರೆ ವಾಪಸ್ಸು ಬರುವುದೆ?



ಹಡಗೇ ವಾಪಸ್ಸು ಬಂದಿರುವಾಗ ಬೆಕ್ಕು ಬಂದೇ ಬರುತ್ತದೆ ಮರಿಗಳ ಸಮೇತ.

ರಮೇಶ್, ಹನುಮನಾಳು

ಇತ್ತೀಚೆಗೆ ಆಮೆ ಗುರುತಿನ ಉಂಗುರಗಳು ಎಲ್ಲರ ಕೈಬೆರಳಿನಲ್ಲಿ ತಾಂಡವಾಡುತ್ತಿವೆಯಲ್ಲಾ.....?

ಕಂಪ್ಯೂಟರ್ ಯುಗವಲ್ಲವೇ; ಎಲ್ಲವೂ ಚಿಪ್(Chip)ನಲ್ಲಿಯೇ ಅಡಗಿದೆ ಎಂದು ಸೂಚಿಸಲು.

ಪಿ. ಜಯವಂತ ಪೈ, ಕುಂದಾಪುರ

ಪೊಲೀಸ್ ಠಾಣೆಯಲ್ಲೇ ಕಳುವಾದರೆ ಜನಸಾಮಾನ್ಯರ ಗತಿ ಏನು?

ಆ ರಕ್ಷಕನ ಗುಡಿಯಲ್ಲೇ ಕಳುವಾಗುವಾಗ ಇದೇನು ಮಹಾ!

ಕಾಳೀಹುಂಡಿ ಶಿವಕುಮಾರ್, ಮೈಸೂರು

ಒಲವಿನ ಪ್ರಿಯಲತೆ ಈಗ ಮೌನವಾಗಿರಲು ಕಾರಣವೇನು?

ನೆಟ್‌ನಲ್ಲಿ ಬೆರಳು ಮಾತನಾಡಲು ಆರಂಭಿಸಿದಮೇಲೆ ಕೊರಳು ಮೌನವೇ.

ಎಚ್. ಆನಂದಕುಮಾರ್, ಚಿತ್ರದುರ್ಗ

ಸಿನಿಮಾ, ನಾಟಕ, ರಾಜಕೀಯ; ಇವುಗಳಲ್ಲಿ ನಿಮ್ಮದು ಯಾವುದರ ಕಡೆಗೆ ರಾಮ್‌ಜೀ?

ರಾಜಕೀಯದಲ್ಲಿನ ಸಿನಿಮೀಯ ರೀತಿಯ ನಾಟಕಗಳ ಕಡೆಗೆ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಗಾದೆ ಮಾತುಗಳೇ ಸುಳ್ಳಾದರೆ ಹೇಗೆ ಸ್ವಾಮಿ?

ವಿರುದ್ಧಗಾದೆ ಬಳಸಿ ಸರಿಪಡಿಸಿ! ಉದಾ: ಹೆಣ್ಣಿನ ಮನಸ್ಸನ್ನು ಅರಿಯಲಾಗದು; ಮುಖವೇ ಮನದ ಕನ್ನಡಿ!

ಬೂಕನಕೆರೆ ವಿಜೇಂದ್ರ, ಮೈಸೂರು

ದೊಡ್ಡ ಮನೆಯವರೇ ಸಣ್ಣ ಮನುಷ್ಯರಂತೆ ವರ್ತಿಸುತ್ತಾರಲ್ಲಾ....?

ತಪ್ಪೇನಿಲ್ಲ. ದೊಡ್ಡದಾಗಿರುವುದು ಮನೆಯಷ್ಟೆ, ಮನಸ್ಸಲ್ಲ.

ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು

ಯಾವುದು ನಮ್ಮ ಜೀವನವನ್ನು ಉತ್ತುಂಗಕ್ಕೇರಿಸುತ್ತದೆ?

ಪೆಂಟ್ ಹೌಸ್.

ಎಂ.ಎ. ಕುಮಾರ್, ಬೆಂಗಳೂರು

ದೇವಲೋಕದ ಸುಂದರಿಯರಿಗೂ, ಭೂಲೋಕದ ಸುಂದರಿಯರಿಗೂ ವ್ಯತ್ಯಾಸವೇನು?

ಆ ಸುಂದರಿಯರಿಗೆ ಮಾಡ್ರನ್ ಡ್ರೆಸ್ ಧರಿಸುವ ಭಾಗ್ಯವೇ ಇಲ್ಲ!

ಮಹಾವೀರ ಕಾಸರ, ಶಿವಮೊಗ್ಗ

ಉ.ಕ.ದವರು ಹೆಣ್ಣು ಕೊಡುವಾಗ ವರನಿಗೆ ಜಮೀನಿದೆಯೆ ಎಂದು ಕೇಳುತ್ತಾರೆ. ಮಗಳು ಜಮೀನಿನ ಕೆಲಸ ಮಾಡುವಳೆ?

ಕೃಷಿ ಕುಂಠಿತವಾದಾಗಲೆಲ್ಲ ನೋಟಿಸ್ ಜಾರಿ ಮಾಡುವ ಅಮೀನನ ಕೆಲಸ ಮಾಡುವಳು.

## ಬಹುಮಾನಿತ ಪ್ರಶ್ನೆ

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಕುಡಿಯಲು ಆಧಾರ್ ಕಾರ್ಡು; ಸುಲಭ ಶೌಚಾಲಯಕ್ಕೆ?

ದುರ್ನಾತಕ್ಕೆ ಮೂರ್ಛೆ ತಪ್ಪಿ ಬೀಳದಿರಲು ಮೂಗಿಗೆ ಕರ್ಚೀಫು.

ಶಿವಸ್ವಾಮಿ ನೇಗೇಕಟ್ಟೆ, ಬೆಂಗಳೂರು

ಮನುಷ್ಯ ಇಚ್ಛಾಮರಣಿಯಾಗಿದ್ದಿದ್ದರೆ...?

ಸಾಯುವ ಇಚ್ಛೆ ಭುಗಿಲೇಳುವಂತೆ ಮಾಡುವ ಸರ್ಕಾರಗಳು ಜಾರಿಗೆ ಬರುತ್ತಿದ್ದವು.

ಸುನಿತಾ ಬಾಣಿ, ಬೆಂಗಳೂರು

ಮಗನಿಗೆ ಉತ್ಸವ ಎಂದು ಹೆಸರಿಟ್ಟರೆ ಅವನ ಬಾಳು ನಿಜವಾದ ಉತ್ಸವ ಆಗುವುದೆ?

ಇಡದಿದ್ದರೂ ಆದೀತು; ಸಕಾರಾತ್ಮಕ ಮನಸ್ಸಿದ್ದರೆ ಬಾಳು ನಿತ್ಯೋತ್ಸವ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಕ್ಯಾಷ್ ಕೌಂಟರ್‌ಗೂ, ಎನ್‌ಕೌಂಟರ್‌ಗೂ ವ್ಯತ್ಯಾಸವೇನು?



ಎನ್‌ಕೌಂಟರ್‌ನಲ್ಲಿ ಲೆಕ್ಕಾಚಾರ ತಪ್ಪಿಸಲಾಗುತ್ತದೆ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಕಂಪನಿ ನಾಟಕಗಳು ಕಡಿಮೆಯಾಗಿರಲು ಕಾರಣವೇನು?

ಪಾರ್ಟಿಗಳು ಲೈಟು, ಮೈಕು, ಪರದೆ, ಪ್ರಾಪ್ಸ್ ಏನೂ ಇಲ್ಲದೆ ನಡೆಯುತ್ತಿರುವ 'ಕಂಬನಿ ನಾಟಕ'ಗಳೇ ಕಾರಣ.

ಮಧುರಾ ಸುಬ್ರಹ್ಮಣ್ಯ, ಬೆಂಗಳೂರು

ಸ್ತ್ರೀಶಕ್ತಿ, ಸ್ತ್ರೀ ವಿಮೋಚನಾ ಸಂಘಗಳಿರುವಂತೆ ಪುರುಷ ಸಂಘಗಳಿಲ್ಲವೇಕೆ?

ಇವೆ. ಆದರೆ ಸ್ತ್ರೀಸಂಘ ಎದುರಾದಾಗ ಅವರ ಸಂಗಕ್ಕೆ ಹಾತೊರೆದು ಕರಗಿಹೋಗುತ್ತವೆ.

**ರಾಮ್**